ಪಿತ್ರಾರ್ಜಿತ ಆಸ್ತಿಯೇ? ಎಂದು ಪರಿಸರವಾದಿಗಳೂ, ಈ ವಿಷಯದಲ್ಲಿ ಮೂಗು ತೂರಿಸಲು ಇದು ನಿಮ್ಮ ಪಿತ್ರಾರ್ಜಿತ ಆಸ್ತಿಯೇ? ಎಂದು ವಸತಿ ಸಂಕೀರ್ಣಗಳ ಒಡೆಯರೂ, ಪರಸ್ಪರ ಪ್ರಶ್ನಿಸಿಕೊಳ್ಳುತ್ತಾ ಇದನ್ನು ಉತ್ತರಿಸಲಾಗದಷ್ಟು ಸಂಕೀರ್ಣಗೊಳಿಸಿದ್ದಾರೆ. ನಾವು ದಡದ ವಾಸಿಗಳು ಇವರೆಲ್ಲ ಮಾತಾಡುವುದನ್ನು ಮೂಗರಳಿಸಿ ನೋಡುತ್ತಾ, ಇಡೀ ದಿನ ಪೂರ್ವದ ಈ ಅಪೂರ್ವ ವಾಸನೆಯನ್ನು ಅನುಭವಿಸುತ್ತಾ ಸ್ವಲ್ಪ ಸ್ವಲ್ಪವೇ ಉತ್ತರದ ನಿರ್ವಾಣದೆಡೆಗೆ ಹೊರಳುತ್ತಿದ್ದೇವೆ. ಚುನಾಯಿತ ಪ್ರತಿನಿಧಿಗಳು ಮಾತ್ರ ತಮ್ಮ ಮೂಗಿನ ನೇರಕ್ಕೆ ಮಾತಾಡದೆ ಎರಡು ಕಡೆಯನ್ನೂ ಸಂಭಾಳಿಸುತ್ತಿದ್ದಾರೆ. ಇದು ಮೂಗು ಮುಚ್ಚಿಕೊಂಡು ಓಡಾಡುವ ಕಾಲವಾದ್ದರಿಂದ ಈ ಪೂರ್ವದ ಉತ್ತರದ ವಾಸನೆಗಳೆಲ್ಲ ಈಗಿನವರನ್ನು ಕಾಡದ ಕಾರಣ ಅವರು ಈ ಕಡೆಗೆ ಮೂಗು ತೋರಿಸದೆ ತಮ್ಮ ಪಾಡಿಗೆ ತಾವಿದ್ದಾರೆ.

ಮೂಗುತಿ ಮುಂಭಾರ
ಹೆಣೆಗಂಟು ಹಿಂಭಾರ

